ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಡಾರ್ಜಲಿಂಗ್ ಎಂಬ ಮಂಜಿನ ಲೋಕ

> ‘ಹಕ್ಕಿ ಹಾರಿ ಮುಂದೆ ಚಲಿಸಿ ಯಾವಾಗ ತನ್ನ ರೆಕ್ಕೆ ತೆರೆದು ಬಡಿಯುತ್ತದೆಯೋ ಅಲ್ಲಿಗೆ ನಿಮ್ಮ ಕ್ಯಾಮೆರಾ ಫೋಕಸ್ ಆಗಬೇಕು. ನೀವು ಆರಂಭದಲ್ಲೇ ಅದನ್ನು ಸೆರೆ ಹಿಡಿಯಲು ಹೋದರೆ ಹೀಗೆ ಆಗುವುದು. ಮೊದಲು ಹಕ್ಕಿ ಹಾರುವ ಹಂತಗಳನ್ನು ಗಮನಿಸಬೇಕು. ಆಮೇಲೆ ಚಿತ್ರ ತೆಗೆಯಬೇಕು’

ನಾವು ತೀಸ್ತಾ ನದಿಯ ದಂಡೆಯ ರಸ್ತೆಯಲ್ಲೇ ಸಾಗುತ್ತಿದ್ದೆವು. ನದಿಯೂ ಹಾವಂತೆ ಹಿಂಬಾಲಿಸುತ್ತಿತ್ತು. ನಮ್ಮ ಡ್ರೈವರ್ ತೀಸ್ತಾ ನದಿ ಹಿಂದಿನ ವರ್ಷದಲ್ಲಿ ಮಾಡಿದ ಅನಾಹುತಗಳನ್ನು ತೋರಿಸುತ್ತಾ ಹೋಗುತ್ತಿದ್ದ. ಅದರ ಹೊಡೆತಕ್ಕೆ ನದಿ ಅಕ್ಕಪಕ್ಕ ಒತ್ತರಿಸಿ ಕಟ್ಟಿಕೊಂಡ ಮನೆಗಳು, ದೊಡ್ಡ ಸೇತುವೆಗಳು ಕೊಚ್ಚಿ ಹೋಗಿದ್ದವು. ಅನೇಕ ಮನೆಗಳು ಮರಳಿನಡಿ ಮುಚ್ಚಿದ್ದವು. ‘ನದಿ ಜಾಗವನ್ನು ಮನುಷ್ಯ ಆಕ್ರಮಿಸಿಕೊಂಡರೆ ಬಿಡುತ್ತದಾ? ನೀವೆ ಹೇಳಿ’ ಎಂದು ನಮ್ಮನ್ನೇ ಪ್ರಶ್ನಿಸಿದ. ನಾವು ಅವನ ಮುಖ ನೋಡಿ ವಿಷಾದ ಸೂಚಿಸಿದೆವು. ನದಿಯ ಪರಿಸರವನ್ನು ಮರಳು ಲೂಟಿ ಮಾಡುವ ಜನ ನಾಶ ಮಾಡಿದ ಬಗ್ಗೆ ಅವನಿಗೆ ಸಿಟ್ಟಿತ್ತು. ನದಿ ಸೇಡು ತೀರಿಸಿಕೊಂಡಿದೆ ಎಂದು ತನ್ನ ತೀರ್ಪು ಪ್ರಕಟಿಸಿದ.

ಹೆಚ್ಚು ರಭಸದಿಂದ ಮುನ್ನುಗ್ಗುವ ತೀಸ್ತಾ ಹಿಮಾಲಯದ ಕಾಂಚನಜುಂಗಾ ಪರ್ವತದ ಸಮೀಪವಿರುವ ಟಿಸೋ ಲೆಮೋ ಸರೋವರದ ಬಳಿ ಜನಿಸುತ್ತದೆ. ಈ ಸ್ಥಳ ಜಗತ್ತಿನ ಅತಿ ಎತ್ತರದ ಪ್ರದೇಶಗಳಲ್ಲಿ ಒಂದು. ಅಂದರೆ ಹದಿನಾರು ಸಾವಿರದ ಏಳುನೂರು ಅಡಿ ಎತ್ತರ. ಇಷ್ಟೊಂದು ಮೇಲಿಂದ ನೆಗೆದು ಓಡೋಡಿ ಬರುವ ಈ ನದಿಯ ವೇಗಕ್ಕೆ ಸಿಕ್ಕಿದವರು ಉಳಿಯಲು ಸಾಧ್ಯವೇ? ಆನೆ ಗಾತ್ರದ ದೊಡ್ಡ ಬಂಡೆಕಲ್ಲುಗಳನ್ನು ಗುದ್ದಿ ತಂದು ಬಿಸ್ಕತ್ತು ಪೀಸುಗಳಂತೆ ಊರಿನ ಮೇಲೆ ಎಸೆದಿತ್ತು. ಇದರ ಹೊಡೆತಕ್ಕೆ ಮನೆ, ರಸ್ತೆ, ಕಾಡು, ಭೂಮಿ ಎಲ್ಲವೂ ಧ್ವಂಸವಾಗಿದ್ದವು.

ನಮ್ಮ ಡ್ರೈವರ್ ರಂಟೂ ಸಾಹು ನದಿ ದಡದ ಮೇಲಿದ್ದ ತೀಸ್ತಾ ಬಜಾರ್ ಎಂಬ ಊರಿನ ಬಳಿ ಕಾರು ನಿಲ್ಲಿಸಿದ. ‘ಮುಂದೆ ಒಳ್ಳೆ ಊಟ ಎಲ್ಲೂ ಸಿಗಲ್ಲ. ನೀವು ಅನ್ನ ಸಾರು ಎಂದರೆ ಇಲ್ಲೇ ತಿನ್ನಬೇಕು. ಇಲ್ಲಿಂದ ನಿರಂತರ ನಾಲ್ಕು ಗಂಟೆಯ ಟಫ್ ಜರ್ನಿ ಇರುತ್ತೆ. ಸಂಪೂರ್ಣ ಪರ್ವತಗಳನ್ನು ಹತ್ತುವ ದಾರಿ ಬಾಕಿ ಇದೆ. ನಾವು ಡಾರ್ಜಲಿಂಗ್ ತಲುಪುವ ಹೊತ್ತಿಗೆ ಸಂಜೆಯೂ ಆಗಬಹುದು. ನಡುವೆ ಎಲ್ಲೂ ಕಾರು ನಿಲ್ಲಿಸಲು ಆಗದಷ್ಟು ಕಿರಿದಾಗಿದೆ. ಘಾಟಿಯಲ್ಲಿ ಒಂದು ವೇಳೆ ಮಳೆಯಾದರೆ, ಮಂಜು ಕವಿದರೆ ಟ್ರಾಫಿಕ್ ಜಾಮ್ ಆಗುತ್ತೆ. ನೀವು